

ಪರಿಕರಗಳನ್ನು ಉಪಯೋಗಿಸುವ ವಿಧಾನ ಹಾಗೂ ಕೈದಿಯ ಅಪರಾಧವನ್ನು ಆಧರಿಸಿ ಶಿಕ್ಷೆ ನೀಡುವ ರೀತಿಯ ಪ್ರಾತ್ಯಕ್ಷಿಕೆ ನಡೆಸಿಕೊಡುತ್ತಾರೆ.

ಕತ್ತಲೆ ತುಂಬಿರುವ ಸುರಂಗದ ಮೂಲಕ ಮತ್ತೊಂದು ಕೋಣೆಗೆ ಮಹಿಳಾ ಮಾರ್ಗದರ್ಶಿ ಕರೆದುಕೊಂಡು ಹೋಗುತ್ತಾರೆ. ವೀಕ್ಷಕರು ಹೆದರಿಕೆಯಿಂದಲೇ ಸುರಂಗದಲ್ಲಿ ಸಾಗುತ್ತಾರೆ. ಸೈನಿಕರು ಯುದ್ಧದಲ್ಲಿ ಕಾದಾಡುವ ಧ್ವನಿ ಹಿನ್ನೆಲೆಯಲ್ಲಿ ಕೇಳಿಬರುತ್ತಿರುತ್ತದೆ. ವಿಶಾಲವಾದ ಕೋಣೆಯನ್ನು ತಲುಪುತ್ತಲೇ, ಅಲ್ಲಿರುವ ದೊಡ್ಡ ಹಡಗಿನ ಪ್ರತಿಕೃತಿ ಹಾಗೂ ಸೈನಿಕರನ್ನು ನೋಡಿ ಅಚ್ಚರಿ ಉಂಟಾಗುತ್ತದೆ. ಅಲ್ಲಿ ನಾಟಿಕಲ್ ಟ್ರೇಡಿಂಗ್ ಸಂಸ್ಥೆಯಾದ ಡಚ್ ಈಸ್ಟ್ ಇಂಡಿಯಾ ಕಂಪನಿಗೆ ಸೇರಲು, ಸ್ಥಳೀಯರಿಗೆ ಬಲವಂತವಾಗಿ ತರಬೇತಿ ನೀಡಲಾಗುತ್ತದೆ. ನಂತರ ಅವರಿಗೆ ಶಸ್ತ್ರಾಸ್ತ್ರಗಳನ್ನು ನೀಡಿ ಹಡಗಿನ ಪ್ರತಿಕೃತಿಯಲ್ಲಿ ಅವರನ್ನು ಹೋಗಲು ಬಿಟ್ಟು, ಕ್ಯಾಪ್ಟನ್ ಪೀತ್ ಹೇನ್' ಪರವಾಗಿ ಸ್ಪ್ಯಾನಿಷ್ ವಿರುದ್ಧ ಹೋರಾಡಲು ಒತ್ತಾಯಿಸಲಾಗುತ್ತದೆ. ಈ ಪ್ರದರ್ಶನದಲ್ಲಿ ಮೂಲ ನಟರೊಂದಿಗೆ ಸೇರಿಕೊಳ್ಳುವ ಅವಕಾಶವನ್ನು ಪ್ರೇಕ್ಷಕರಿಗೂ ನೀಡಲಾಗುತ್ತದೆ. ಕಾದಾಡುವಾಗ ಅನುಸರಿಸಬೇಕಾದ ಕ್ರಮಗಳನ್ನೂ ತಿಳಿಸಿಕೊಡುತ್ತಾರೆ. ಹಡಗಿನ ಪ್ರತಿಕೃತಿಯಲ್ಲಿ ಕಾದಾಡುವುದು ಪ್ರೇಕ್ಷಕರಿಗೆ ಅನಿರ್ವಚನೀಯ ಅನುಭವ ನೀಡುತ್ತದೆ.

ಶಿಪ್ ಡಾಕ್ಟರ್: ಈ ಪ್ರದರ್ಶನದಲ್ಲಿ, ಹಡಗಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾಕ್ಟರ್ 18ನೇ ಶತಮಾನದಲ್ಲಿ ನಡೆಸುತ್ತಿದ್ದ ಶಸ್ತ್ರಚಿಕಿತ್ಸೆಯ ಭೀಕರತೆಗೆ ಸಾಕ್ಷಿಯಾಗುತ್ತಾನೆ. ಡಾಕ್ಟರ್ ಮನಬಂದಂತೆ ಶಸ್ತ್ರಚಿಕಿತ್ಸೆ ನಡೆಸುತ್ತಾನೆ. ರೋಗಿಯ ರಕ್ತಸಿಕ್ತ ಕರುಳನ್ನು ತನ್ನ ಕೊರಳಿಗೆ ಹಾಕಿಕೊಂಡು ವಿಕೃತಿ ಮೆರೆಯುತ್ತಾನೆ. ರೋಗಿಯ ಹೃದಯವನ್ನು ಹೊರತೆಗೆದು ಕೈಯಲ್ಲಿ ಹಿಡಿದುಕೊಂಡು ಗಹಗಹಿಸಿ ನಗುತ್ತಾ ಪ್ರೇಕ್ಷಕರಿಗೆ ತೋರಿಸುತ್ತಾನೆ. ಇನ್ನೂ ಬಡಿದುಕೊಳ್ಳುತ್ತಿರುವ ಹೃದಯ ಹಾಗೂ ಅದರಿಂದ ಸೋರುತ್ತಿರುವ ರಕ್ತ ಪ್ರೇಕ್ಷಕರನ್ನು ಭಯಭೀತರನ್ನಾಗಿಸುತ್ತದೆ.

ಕೌನ್ಸಿಲ್ ಆಫ್ ಬ್ಲಡ್: 16ನೇ ಶತಮಾನದಲ್ಲಿ ಸ್ಪ್ಯಾನಿಷ್ ವಿಚಾರಣೆಯಿಂದಾಗಿ ನೆದರ್ಲೆಂಡ್ಸ್‌ಗೆ ಉಗ್ರವಾದವನ್ನು ತರಲಾಯಿತು. ತದನಂತರ ಇಂಗ್ಲೆಂಡ್‌ನಲ್ಲಿ ಅದೇ ರೀತಿಯ ವಿಚಾರಣಾ ನ್ಯಾಯಾಲಯ ಪಾತಕಿಗಳ ಬಗ್ಗೆ ನೀಡಲಾದ ತೀರ್ಪಿನಿಂದ ವಿಚಾರಣಾಧಿಕಾರಿ ಭೀತಿಗೊಂಡಿರುವುದನ್ನು ಹಾಸ್ಯಮಯವಾಗಿ ತೋರಿಸಲಾಗುತ್ತದೆ.

ಬ್ಲ್ಯಾಕ್ ಜಾನ್ ಶವಪರೀಕ್ಷೆ: ಸಂದರ್ಶಕರನ್ನು ಒಂದು ಕೋಣೆಯೊಳಗೆ ಕರೆದೊಯ್ಯಲಾಗುತ್ತದೆ. ಒಂದು ಟೇಬಲ್ ಮೇಲೆ ಶವವನ್ನು ಬಟ್ಟೆಯಿಂದ ಮುಚ್ಚಿರುತ್ತಾರೆ. 'ಇದೀಗತಾನೇ ಬ್ಲ್ಯಾಕ್ ಜಾನಿಯ ಶವಪರೀಕ್ಷೆ ನಡೆದಿದೆ. ನಿಮ್ಮಲ್ಲಿ ಯಾರಾದರೂ ಶವವನ್ನು ನೋಡಬಯಸುತ್ತೀರಾ?' ಎಂದು ನಿರೂಪಕ ಪ್ರೇಕ್ಷಕರನ್ನು ಪ್ರಶ್ನಿಸುತ್ತಾನೆ. ಯಾರೂ ಮುಂದೆ ಬರುವ ಸಾಹಸ ಮಾಡುವುದಿಲ್ಲ. 'ಪರವಾಗಿಲ್ಲ ನಾನೇ ತೋರಿಸುತ್ತೇನೆ. ನೀವು ದೂರದಿಂದಲೇ ವೀಕ್ಷಿಸಿ' ಎಂದು ತಲೆಯ ಭಾಗದ ಬಟ್ಟೆಯನ್ನು ಸರಿಸುತ್ತಾನೆ. ತಲೆಬುರುಡೆ ಚಿಪ್ಪನ್ನು ತೆಗೆಯಲಾಗಿದ್ದು ಮೆದುಳು ಕಾಣುತ್ತದೆ. ಎದೆಯ ಭಾಗದ ಬಟ್ಟೆಯನ್ನು ಸರಿಸಿ, ಎದೆಗೂಡಿನಿಂದ ಕೆಂಪಗಿನ ಹೃದಯವನ್ನು ಹೊರತೆಗೆಯುತ್ತಾನೆ. ತದನಂತರ ಹೊಟ್ಟೆಯ ಭಾಗದ ಬಟ್ಟೆ ಸರಿಸಿ ಹೊಟ್ಟೆಯೊಳಗಿನಿಂದ ಕರುಳು ಹಾಗೂ ಇತರೆ ಅವಯವಗಳನ್ನು ಎತ್ತಿ ತೋರಿಸುತ್ತಾನೆ. ದೇಹದೊಳಗಿನ ಅವಯವಗಳು ಹಾಗೂ ನಗ್ನ ಶವ ವೀಕ್ಷಕರಲ್ಲಿ ಭಯವನ್ನುಂಟುಮಾಡುತ್ತವೆ.

ಮಾಟಗಾತಿಯ ದೆವ್ವ: 16ನೇ ಶತಮಾನದಲ್ಲಿ ಓರ್ವ ಮಹಿಳೆಯನ್ನು ಮಾಟಗಾತಿಯೆಂದು ತಪ್ಪಾಗಿ ಭಾವಿಸಿ ಆಮ್‌ಸ್ಟರ್‌ಡ್ಯಾಂ ನಗರದ ಚೌಕದಲ್ಲಿ ಚಿತ್ರಹಿಂಸೆ ನೀಡಿ ಸಾಯಿಸುತ್ತಾರೆ. ಮಹಿಳೆಯನ್ನು ಸಾಯಿಸುವ ದೃಶ್ಯದಲ್ಲಿ, ಚಿತ್ರಹಿಂಸೆ ನೀಡಲು ಬಳಸಿದ ಆಯುಧಗಳು, ರಕ್ತ ಸೋರುವಿಕೆ ಹಾಗೂ ಚಿತ್ರಹಿಂಸೆಗೆ ಒಳಗಾದ ನಟಿಯ ನಟನೆ ಸಹಜತೆಗೆ ಹತ್ತಿರವಾಗಿತ್ತು.

ಪ್ರೇಕ್ಷಕರ ಮುಂದೆಯೇ ಚಿತೆಯ ಮೇಲೆ ಮಾಟಗಾತಿಯ ಶವವನ್ನಿರಿಸಿ, ಪ್ರೇಕ್ಷಕರಿಂದಲೇ ಚಿತೆಗೆ ಅಗ್ನಿಸ್ಪರ್ಶ ಮಾಡಿಸಲಾಗುತ್ತದೆ. ಈ ಸಮಯದಲ್ಲಿ ಧ್ವನಿ ಮತ್ತು ಬೆಳಕುಗಳ ಸ್ಪೆಷಲ್ ಎಫೆಕ್ಟ್ ಇರುತ್ತದೆ. ಉರಿಯುತ್ತಿರುವ ಚಿತೆಯನ್ನು ಪ್ರೇಕ್ಷಕರು ಬೆರಗು ಕಣ್ಣುಗಳಿಂದ ನೋಡುತ್ತಿರುತ್ತಾರೆ. ಒಮ್ಮೆಲೇ ಪ್ರೇಕ್ಷಕರ ಗುಂಪಿನ ಹಿಂಭಾಗದಲ್ಲಿ ಸದ್ದಾಗುತ್ತದೆ. ಪ್ರೇಕ್ಷಕರು ಅಶ್ಚರ್ಯದಿಂದ ತಿರುಗಿ ನೋಡುತ್ತಾರೆ. ಶವಸಂಸ್ಕಾರ ನಡೆದ ಮಾಟಗಾತಿ ದೆವ್ವದ ರೂಪತಾಳಿ, ಕೈಯಲ್ಲಿ ಲಾಟೀನು ಹಿಡಿದು ಹೋಗುತ್ತಿರುತ್ತಾಳೆ. ಇದನ್ನು ನೋಡಿದ ವೀಕ್ಷಕರ ಮೈ ಸಹಜವಾಗಿಯೇ ಬೆವರುತ್ತದೆ. ಹೃದಯದ ಬಡಿತ ಹೆಚ್ಚಾಗುತ್ತದೆ.

ದಿ ಗ್ರೇಟ್ ಪ್ಲೇಗ್: 1664ರಲ್ಲಿ ಆಮ್‌ಸ್ಟರ್‌ಡ್ಯಾಂ ನಗರದ ಬೀದಿ ಬೀದಿಗಳಲ್ಲೂ ಮಾರಣಾಂತಿಕ ಪ್ಲೇಗ್ ಮಹಾಮಾರಿ ವಿನಾಶವನ್ನುಂಟು ಮಾಡಿತು. ಇದೇ ದೃಶ್ಯವನ್ನು ಹಲವು ನಟರು ಸೇರಿ ಪರಿಣಾಮಕಾರಿಯಾಗಿ ಅಭಿನಯಿಸಿ ಪ್ರೇಕ್ಷಕರನ್ನು ದಂಗುಬಡಿಸುತ್ತಾರೆ.

ಪ್ರದರ್ಶನ ಮುಕ್ತಾಯವಾದ ನಂತರ ಕತ್ತಲು ತುಂಬಿದ ಸುರಂಗದ ಮೂಲಕ ನಿರ್ಗಮಿಸುವ ಮಾರ್ಗದ ಉದ್ದಕ್ಕೂ ಹೆಣಗಳು ಬೀಳುತ್ತಿರುವ ಸದ್ದು ಕೇಳಿಸುತ್ತದೆ. ಹೆಣಗಳ ವಾಸನೆ ಮೂಗಿಗೆ ಬಡಿಯುತ್ತಿರುತ್ತದೆ. ಹೆಣಗೆ ತಣ್ಣನೆಯ ವಸ್ತು ತಾಗಿದಂತಾಗುತ್ತದೆ. ಮುಟ್ಟಿ ನೋಡಿದರೆ, ಅದೊಂದು ಶವದ ಪ್ರತಿಕೃತಿ. ಹಲವು ವೀಕ್ಷಕರಿಗೆ ಇಂತಹ ಅನುಭವವಾಗುತ್ತದೆ. ಕೆಲವರು ಭಯದಿಂದ ಚೀರಿದರೆ, ಇನ್ನು ಕೆಲವರು ತಮ್ಮ ಪಕ್ಕದಲ್ಲಿರುವವರನ್ನು ಹೆದರಿಕೆಯಿಂದ ಬಿಗಿದಪ್ಪಿಕೊಳ್ಳುತ್ತಾರೆ.

ಪ್ರದರ್ಶನದ ನಂತರ ಒಂದು ವಿಶಾಲವಾದ ಕೋಣೆಯಲ್ಲಿ ವೀಕ್ಷಕರ ಅನುಭವವನ್ನು ದಾಖಲಿಸಿಕೊಳ್ಳುತ್ತಾರೆ. ಸಂದರ್ಶಕನ ಪ್ರಶ್ನೆಗಳಿಗೆ, ಎದೆ ಗುಂಡಿಗೆ ಗಟ್ಟಿಯಿರುವ ನಾಲ್ಕಾರು ಮಂದಿ ಮಾತ್ರ ಪ್ರತಿಕ್ರಿಯೆ ನೀಡುತ್ತಾರೆ. ನಂತರ ವಿಶ್ರಮಿಸಲು ಹೇಳಿ ಆಮ್‌ಸ್ಟರ್‌ಡ್ಯಾಂನಲ್ಲೇ ತಯಾರಾಗುವ 'ಹೈನೆಕನ್ ಬಿಯರ್' ಹಾಗೂ ತಂಪು ಪಾನಿಯವನ್ನು ನೀಡಿ, ಡಂಜನ್ ವೀಕ್ಷಿಸಿದ್ದಕ್ಕೆ ಕೃತಜ್ಞತೆ ತಿಳಿಸುತ್ತಾರೆ.

ಚಿತ್ರಗಳು: istockphoto.com ಮತ್ತು ಅಂತರ್ಜಾಲ

ಪ್ರತಿಕ್ರಿಯಿಸಿ: feedback@sudha.co.in

### ಛಾಯಾಗ್ರಹಣ ನಿಷೇಧ

ಪ್ರದರ್ಶನಗಳೆಲ್ಲವೂ ಮಂದ ಬೆಳಕಿನಲ್ಲಿ ಸಾಗುವುದರಿಂದ ಹಾಗೂ ಸ್ಪೆಷಲ್ ಎಫೆಕ್ಟ್‌ಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವ ದೃಷ್ಟಿಯಿಂದ ಡಂಜನ್‌ನಲ್ಲಿ ಛಾಯಾಗ್ರಹಣವನ್ನು ನಿಷೇಧಿಸಲಾಗಿದೆ.

ಪ್ರೇಕ್ಷಕರು ಬಯಸಿದಲ್ಲಿ ಪ್ರವೇಶ ದ್ವಾರದಲ್ಲಿ ಇರಿಸಲಾಗಿರುವ, ಶಿಕ್ಷೆ ನೀಡಲು ಉಪಯೋಗಿಸುವ ಕೆಲವು ಪರಿಕರಗಳ ಮುಂದೆ ನಿಂತು ಫೋಟೊ ತೆಗೆಸಿಕೊಳ್ಳಬಹುದು. ಶಿಕ್ಷೆಯನ್ನು ಅನುಭವಿಸುತ್ತಿರುವಂತೆ ಗ್ರಾಫಿಕ್ಸ್ ಮಾಡಲಾದ ಫೋಟೊ ಪ್ರತಿಯನ್ನು ಪ್ರದರ್ಶನ ಮುಗಿದ ನಂತರ ಪ್ರೇಕ್ಷಕರಿಗೆ ನೀಡುತ್ತಾರೆ.

ಪ್ರೇಕ್ಷಕರು ತಮ್ಮ ನೆಂಟರಿಷ್ಟರಿಗೆ ಸ್ಮರಣಿಕೆಗಳನ್ನು ಖರೀದಿಸಲು ಅನುಕೂಲವಾಗುವಂತೆ, ರೋಮಾಂಚಕ ಗ್ಯಾಜೆಟ್‌ಗಳ ಅಂಗಡಿ ಅಲ್ಲಿದೆ.

'ಆಮ್‌ಸ್ಟರ್‌ಡ್ಯಾಂ ಡಂಜನ್' ಪ್ರತಿದಿನ ಬೆಳಿಗ್ಗೆ 11ರಿಂದ ಸಂಜೆ 6ರವರೆಗೆ ತೆರೆದಿರುತ್ತದೆ. ಸುಮಾರು 1 ಗಂಟೆ 20 ನಿಮಿಷಗಳ ಪ್ರತೀ ಪ್ರದರ್ಶಕ್ಕೆ ಕನಿಷ್ಠ 15 ಪ್ರೇಕ್ಷಕರಿರುವಂತೆ ನೋಡಿಕೊಳ್ಳುತ್ತಾರೆ.